## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪಿಚ್ಚಗುಂಟ್ಲು (Pichiguntala), ಹೆಳವ (Helava) ಜಾತಿಗಳ ಕುಲಶಾಸ್ತ್ರೀಯ ಅಧ್ಯಯನ ನಡೆಸುವ ಬಗ್ಗೆ.

*****

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಸಕಇ 150 ಎಸ್‌ಎಡಿ 2010, ದಿನಾಂಕ: 20-06-2012,
2. ನಿರ್ದೇಶಕರು, ಕರ್ನಾಟಕ ರಾಜ್ಯ ಗಿರಿಜನ ಸಂಶೋಧನಾ ಸಂಸ್ಥೆ, ಇವರ ಪತ್ರ ಸಂಖ್ಯೆ:ಟಿಆರ್‌ಐ/ಮೈ/ಸಿಆರ್-36/2012-13, ದಿನಾಂಕ:08-10-2012,
3. ಸರ್ಕಾರದ ಪತ್ರ ಸಂಖ್ಯೆ: ಸಕಇ 150 ಎಸ್‌ಎಡಿ 2010, ದಿನಾಂಕ:04-01-2013.
4. ನಿರ್ದೇಶಕರು, ಕರ್ನಾಟಕ ರಾಜ್ಯ ಗಿರಿಜನ ಸಂಶೋಧನಾ ಸಂಸ್ಥೆ, ಇವರ ಪತ್ರ ಸಂಖ್ಯೆ:ಟಿಆರ್‌ಐ/ಮೈ/ಸಿಆರ್-36/2012-13, ದಿನಾಂಕ:18-01-2013.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ(1)ರಲ್ಲಿನ ಸರ್ಕಾರಿ ಆದೇಶ ದಿನಾಂಕ:20-06-2012ರಲ್ಲಿ ಪಿಚ್ಚಗುಂಟ್ಲು ಮತ್ತು ಹೆಳವ ಜಾತಿಯನ್ನು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ ಹಲವಾರು ಮನವಿಗಳು ಬಂದ ಹಿನ್ನಲೆಯಲ್ಲಿ ರೂ.2,85,000/-ಗಳ ವೆಚ್ಚದಲ್ಲಿ ಸದರಿ ಜಾತಿಗಳ ಕುಲಶಾಸ್ತ್ರೀಯ ಅಧ್ಯಯನ ನಡೆಸಲು ಮೈಸೂರು ವಿಶ್ವವಿಶ್ವವಿದ್ಯಾಲಯ ಮಾನವಶಾಸ್ತ್ರ ವಿಭಾಗ, ಇವರಿಗೆ ವಹಿಸಿಕೊಡಲಾಗಿತ್ತು.

ನಿರ್ದೇಶಕರು, ಕರ್ನಾಟಕ ರಾಜ್ಯ ಗಿರಿಜನ ಸಂಶೋಧನಾ ಸಂಸ್ಥೆ, ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿನ ದಿನಾಂಕ:08-10-2012ರ ಪತ್ರದಲ್ಲಿ ಪಿಚ್ಚಗುಂಟ್ಲು ಮತ್ತು ಹೆಳವ ಜಾತಿಗಳ ಕುಲಶಾಸ್ತ್ರೀಯ ಅಧ್ಯಯನ ನಡೆಸಲು ವಹಿಸಿದ್ದ, ಮೈಸೂರು ವಿಶ್ವವಿದ್ಯಾನಿಲಯದ ಸಹಪ್ರಾಧ್ಯಾಪಕರಾದ ಡಾ॥ ಹೆಚ್.ಎಂ. ಗಣೇಶ್, ಇವರು ದಿನಾಂಕ:20-09-2012ರಂದು ಸೇವೆಯಿಂದ ನಿವೃತ್ತಿಯಾಗಿದ್ದು, ಸದರಿ ಅಧ್ಯಯನವನ್ನು ನಡೆಸಲು ಸಾಧ್ಯವಿಲ್ಲವೆಂದು ತಿಳಿಸಿ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುವಂತೆ ಕೋರಿರುವುದರಿಂದ ಸದರಿ ಜಾತಿಗಳ ಕುಲಶಾಸ್ತ್ರೀಯ ಅಧ್ಯಯನ ನಡೆಸಲು ಬೇರೆ ಬೇರೆ ವಿಶ್ವವಿದ್ಯಾನಿಲಯಗಳಿಂದ ಪ್ರಸ್ತಾವನೆಯನ್ನು ಪಡೆಯಬೇಕೆ? ಅಥವಾ ಕರ್ನಾಟಕ ರಾಜ್ಯ ಗಿರಿಜನ ಸಂಶೋಧನಾ ಸಂಸ್ಥೆ ವತಿಯಿಂದಲೇ ಕೈಗೊಳ್ಳಲು ಪ್ರಸ್ತಾವನೆ ಸಲ್ಲಿಸಬೇಕೆ? ಎಂಬ ಬಗ್ಗೆ ಸರ್ಕಾರದ ಆದೇಶ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ(3)ರಲ್ಲಿನ ಸರ್ಕಾರ ಪತ್ರ ದಿನಾಂಕ:04-01-2013ರಲ್ಲಿ ಕರ್ನಾಟಕ ರಾಜ್ಯದಲ್ಲಿನ ಪಿಚ್ಚಗುಂಟ್ಲು ಮತ್ತು ಹೆಳವ ಜಾತಿಗಳ ಕುಲಶಾಸ್ತ್ರೀಯ ಅಧ್ಯಯನವನ್ನು ಈಗಾಗಲೇ ಮೈಸೂರು ವಿಶ್ವವಿದ್ಯಾಲಯಕ್ಕೆ ವಹಿಸಲಾದ ರೂ. 2,85,000/-ಗಳ ವೆಚ್ಚದಲ್ಲಿಯೇ 6 ತಿಂಗಳ ಅವಧಿಯಲ್ಲಿ ಕೈಗೊಂಡು ಸರ್ಕಾರಕ್ಕೆ ವರದಿ ನೀಡಲು ನಿರ್ದೇಶಕರು, ಕರ್ನಾಟಕ ರಾಜ್ಯ ಗಿರಿಜನ ಸಂಶೋಧನಾ ಸಂಸ್ಥೆ, ಮೈಸೂರು, ಇವರಿಗೆ ತಿಳಿಸಲಾಗಿತ್ತು.

ನಿರ್ದೇಶಕರು, ಕರ್ನಾಟಕ ರಾಜ್ಯ ಗಿರಿಜನ ಸಂಶೋಧನಾ ಸಂಸ್ಥೆ, ಮೈಸೂರು, ಇವರು ಮೇಲೆ ಓದಲಾದ ಕ್ರಮ ಸಂಖ್ಯೆ(4)ರಲ್ಲಿನ ಪತ್ರ ದಿನಾಂಕ: 18-01-2013ರಲ್ಲಿ ಈ ಹಿಂದೆ ಕುಲಸಚಿವರು ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಇವರು ರೂ. 2,85,000/- ವೆಚ್ಚದಲ್ಲಿ ಕೇವಲ 2 ಜಿಲ್ಲೆಗಳಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದು, ಈ ಜನಾಂಗದವರು ಎಲ್ಲಾ ಜಿಲ್ಲೆಗಳಲ್ಲಿ ವಾಸಿಸುತ್ತಿರುವುದರಿಂದ ಸಂಪೂರ್ಣ ಕುಲಶಾಸ್ತ್ರೀಯ ಅಧ್ಯಯನವನ್ನು ರೂ. 5, 52,000/-(ಐದು ಲಕ್ಷದ ಐವತ್ತೆರಡು ಸಾವಿರ ರೂಪಾಯಿಗಳು ಮಾತ್ರ)ಗಳ ವೆಚ್ಚದಲ್ಲಿ 12 ತಿಂಗಳ ಕಾಲಾವಧಿಯಲ್ಲಿ ಕೈಗೊಳ್ಳಲು ಪರಿಷ್ಕೃತ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಕಇ 150 ಎಸ್‌ಎಡಿ 2010 ಬೆಂಗಳೂರು**
**ದಿನಾಂಕ:20-03-2013**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ರಾಜ್ಯದಲ್ಲಿನ ಪಿಚ್ಚಗುಂಟ್ಲು ಮತ್ತು ಹೆಳವ ಜಾತಿಗಳ ಆಚಾರ, ವಿಚಾರ, ಭಾಷೆ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸ್ಥಿತಿಗತಿ, ಭೌಗೋಳಿಕ ಅಂಶಗಳ ಕುರಿತಂತೆ ಈ ಕೆಳಕಂಡ 5 ಅಂಶಗಳನ್ನು ಪರಿಗಣಿಸಿ, ಕುಲಶಾಸ್ತ್ರೀಯ ಅಧ್ಯಯನವನ್ನು ರೂ.5,52,000/- ಲಕ್ಷಗಳ(ಐದು ಲಕ್ಷದ ಐವತ್ತೆರಡು ಸಾವಿರ ರೂಪಾಯಿಗಳು ಮಾತ್ರ) ವೆಚ್ಚದಲ್ಲಿ ಕೈಗೊಳ್ಳಲು ನಿರ್ದೇಶಕರು, ಕರ್ನಾಟಕ ರಾಜ್ಯ ಗಿರಿಜನ ಸಂಶೋಧನಾ ಸಂಸ್ಥೆ, ಮೈಸೂರು, ಇವರಿಗೆ ವಹಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರದ ಮಂಜೂರಾತಿ ನೀಡಲಾಗಿದೆ.

| | |
|---|---|
| 1) | ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗೆ ಈ ಕೆಳಕಂಡ ಐದು ವಿಷಯಗಳನ್ನು ಪರಿಗಣಿಸುವುದು.<br>1. Indication of Primitive traits<br>2. Distinctive Culture,<br>3. Geographical Isolation<br>4. Shyness of contact with the community at large<br>5. Backwardness |
| 2) | ಕುಲಶಾಸ್ತ್ರೀಯ ಅಧ್ಯಯನ ಅಂದಾಜು ವೆಚ್ಚವಾದ ₹5,52,000/- ಹೊರತುಪಡಿಸಿ ಸಂಸ್ಥೆಯ ಯಾವುದೇ ವೆಚ್ಚಗಳನ್ನು ಸಮಾಜ ಕಲ್ಯಾಣ ಇಲಾಖೆ ಭರಿಸುವುದಿಲ್ಲ |
| 3) | ಪಿಚ್ಚಗುಂಟ್ಲು ಮತ್ತು ಹೆಳವ ಜಾತಿಗಳನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿಸಬಹುದೇ ಎಂಬ ಕುರಿತಂತೆ ವರದಿಯಲ್ಲಿ ಸ್ಪಷ್ಟ ಅಭಿಪ್ರಾಯ ನಮೂದಿಸತಕ್ಕದ್ದು. |
| 5) | ಅಂತಹ ಅಧ್ಯಯನವನ್ನು ಒಂದು ವರ್ಷ(12 ತಿಂಗಳು)ದಲ್ಲಿ ಪೂರ್ಣಗೊಳಿಸಿ ವರದಿ ಸಲ್ಲಿಸತಕ್ಕದ್ದು. |
| 6) | ಅಧ್ಯಯನ ವರದಿಯನ್ನು ಕನ್ನಡ ಭಾಷೆ ಹಾಗೂ ಆಂಗ್ಲ ಭಾಷೆ ಇವುಗಳಲ್ಲಿ ತಯಾರಿಸಿ ತಲಾ ಐದು ಪ್ರತಿಗಳಲ್ಲಿ ಒದಗಿಸತಕ್ಕದ್ದು. |

ಆ ಸಂಬಂಧದ ವೆಚ್ಚವನ್ನು ನಿರ್ದೇಶಕರು, ಕರ್ನಾಟಕ ರಾಜ್ಯ ಗಿರಿಜನ ಸಂಶೋಧನಾ ಸಂಸ್ಥೆಗೆ ಕುಲಶಾಸ್ತ್ರೀಯ ಅಧ್ಯಯನ ನಡೆಸಲು ಗಿರಿಜನ ಉಪಯೋಜನೆಯಡಿ ಕ್ರೋಢೀಕೃತ ಲೆಕ್ಕಶೀರ್ಷಿಕೆ: 2225-02-283-0-02(ಯೋಜನೆ)ರ ಅಡಿ ಒದಗಿಸಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾದ ಆರ್ಥಿಕ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್.ನರಸಿಂಹಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:-

1) ಮಹಾಲೇಖಪಾಲರು, (ಎ ಮತ್ತು ಇ, ಲೆಕ್ಕಪರಿಶೋಧನೆ-1 ಮತ್ತು ಲೆಕ್ಕಪರಿಶೋಧನೆ-2) ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3) ನಿರ್ದೇಶಕರು, ಕರ್ನಾಟಕ ರಾಜ್ಯ ಗಿರಿಜನ ಸಂಶೋಧನಾ ಸಂಸ್ಥೆ, ಮೈಸೂರು.
4) ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಕೃಷಿ ಭವನ, ಬೆಂಗಳೂರು.
5) ಶಾಖಾ ರಕ್ಷ ಕಡತ.
6) ಹೆಚ್ಚುವರಿ ಪ್ರತಿ-03.